



ಬೇಲಿಯಾಗಿ ಬಂಧಿಸಿರುವ ಮರದ ಬೇರು ಪ್ರೇಮ ಜೋಕಾಲಿಯೂ ಆದೀತು. ಅಂದರೆ ಮನುಷ್ಯರನ್ನಾಗಿ ನೋಡಿದರೆ ಸಾಕು. ಅವರ ಬಾಹ್ಯ ಚಹರೆಯನ್ನು ಬಿಟ್ಟು ಭಾವ ಚಹರೆಯನ್ನು ಗೌರವಿಸುವುದೇ ನಾಗರಿಕ ಜೀವನ.

## ಕೊರಡು ಕೊನರುವುದಿಲ್ಲ..

ಜೀವ ನೀಡಿದ ಬೇರುಗಳ ಸಂಪರ್ಕ ಕಳೆದುಕೊಂಡ ಕೊರಡು ನಿರ್ಜೀವಗೊಂಡ ಬಳಿಕ ಹೇಗೆ ಚಿಗುರೀತು? ಪೋಷಕರ ಮಮತೆಯ ಮಡಿಲು ಕಳೆದುಕೊಂಡು ಸಮಾಜದಿಂದ ಕಡೆಗಣನೆಗೆ ತುತ್ತಾದ ಜೀವವೂ ಒಣಗಿದ ಮರದಂತೆಯೇ ಆಗಿದೆ. ಬದುಕು ಬೇರಿನ ತಂತುಗಳನ್ನೇ ಕತ್ತರಿಸಿದ ಮೇಲೆ ಕೊರಡೇ ಆದೀತು ಎನ್ನುವ ಸೂಕ್ಷ್ಮತೆಯನ್ನು ಇಲ್ಲಿನ ಚಿತ್ರಗಳು ಹೇಳುತ್ತವೆ. ಕಸದ ರಾಶಿಯ ಮೇಲೆ ಲಲನೆಯರ ಚಿತ್ರವೂ ತಾಜ್ಯದ ಮೇಲೆ ಜೀವಂತರೂಪವನ್ನು ಕಾಣಿಸುತ್ತದೆ. ಬಂಧುಗಳ ಬಾಂಧವ್ಯದ ತಂತು ಕತ್ತರಿಸಿ ಬೀದಿಗೆ ಬಿದ್ದ ಇವರ ತಪ್ಪಾದರೂ ಏನು? ಬಾಹ್ಯ ಚಹರೆಯ ಈ ಲಿಂಗ ನನ್ನದಲ್ಲ, ನನ್ನ ಮನಸ್ಸು ಬಿಂಬಿಸುವ ಲಿಂಗ ಅದರ ವಿರುದ್ಧ ಎಂದು ಹೇಳಿದ್ದೇ ಅವರ ಪಾಲಿಗೆ ಶಾಪವಾಗಿದೆ. ಅದೇ ಅವರನ್ನು ಅವರ ಪೋಷಕರಿಂದ ದೂರಮಾಡಿದೆ. ಸಮಾಜದ ಅಪನಿಂದೆಯ ಬೇಗೆಯಲ್ಲಿ ಬೆಂದು ಆಕ್ರೋಶ ಅವರೆದೆಯಲಿ ಮಡುಗಟ್ಟಿದೆ. ಹೊತ್ತಿನ ತುತ್ತಿಗಾಗಿ ಕೈಚಾಚುವುದು ಅನಿವಾರ್ಯ, ಇಲ್ಲವೇ ಲೈಂಗಿಕ ಕಾಯಕದ ಹಾದಿ ತುಳಿಯಬೇಕು.

## ಮಾಡೆಲ್ಸ್ ಮಂಗಳಮುಖಿ..

ಸಂವೇದನಾಶೀಲ ಫೋಟೊ ಪತ್ರಕರ್ತ ಕೆ. ವೆಂಕಟೇಶ್ ಪಂಚ ಮಂಗಳಮುಖಿಯರ ಬದುಕನ್ನು ಕೇಂದ್ರೀಕರಿಸಿ ಬೆಂಗಳೂರಿನ ಬೀದಿಯ ಮರಗಳ ಸಾಲಿನ ಕ್ಯಾನ್ವಾಸ್‌ನಲ್ಲಿ ಚಿತ್ರಕಾವ್ಯವನ್ನು ಮೂಡಿಸಿದ್ದಾರೆ. ಐವರು ತೃತೀಯಲಿಂಗಿ ಅಥವಾ ಲಿಂಗಪರಿವರ್ತಿತರನ್ನು (ಕ್ರಾಸ್ ಜಂಡರ್) ರೂಪದರ್ಶಿಯರನ್ನಾಗಿ ಮಾಡಿಕೊಂಡು ನಗರದ ಬೀದಿಬದಿಯ ಮರ ಕಸದ ಒಳಗೆ ಅವರ ಬದುಕನ್ನು ಸೆರೆಹಿಡಿದಿದ್ದಾರೆ. ನೂರಾರು ಚಿತ್ರಗಳೂ ಒಂದೊಂದು ಕಥೆಯನ್ನು ಹೇಳುವ ನವ್ಯ ಕಾವ್ಯವಾಗಿ ಕಾಣಿಸುತ್ತವೆ. ಚಿತ್ರಕಲಾವಿದನ ಸೂಕ್ಷ್ಮಗ್ರಹಿಕೆ ಛಾಯಾಚಿತ್ರಗಳಲ್ಲಿ ಇಣುಕಿದೆ. ಮನಸ್ಸನ್ನು ಒಂದಿಷ್ಟು ಕಾಲ ವಿಚಲಿತಗೊಳಿಸಿ ಚಿಂತನೆಗೆ ಹಚ್ಚುವ ಚಿತ್ರ ಸಂಪುಟ ನೋಡುವುದೇ ಚಂದ.